<u>ದಿನಾಂಕಃ **16.08.2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು **1, 3, 5** ನೇ ಪ್ರತಿವಾದಿಗಳ ಪರ ಶ್ರೀ ಆರ್ ಎಮ್ ವಕೀಲರಿಂದಃ-</u>

1. ನನಗೆ ಕನ್ನಡ ಸ್ವಲ್ಪ ಓದಲು - ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಅಂಶಗಳು ಗೊತ್ತಿದೆ. ಅದಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾವು 3 ಜನ ವಾದಿಯರು ಸೇರಿ ವಾದಪತ್ರಕ್ಕೆ ಮಾಹಿತಿಯನ್ನು ನೀಡಿರುತ್ತೇವೆ. ನನ್ನ ತಂದೆ ಹೆಸರು ಶಾದಲಿಖಾನ್ ಮತ್ತು 1 ನೇ ಪ್ರತಿವಾದಿ ನನ್ನ ತಾಯಿ, 2 ರಿಂದ 4 ನೇ ಪ್ರತಿವಾದಿಗಳು ನನ್ನ ಸಹೋದರರು ಎಂದರೆ ಸರಿ. ದಾವಾ ಸ್ವತ್ತುಗಳು ನಮ್ಮ ಕುಟುಂಬದ ಮೂಲ ಸ್ವತ್ತುಗಳು ಎಂದು ತೋರಿಸಲು ದಾಖಲಾತಿಗಳನ್ನು ಹಾಜರಪಡಿಸಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತುಗಳನ್ನು ನನ್ನ ತಂದೆ ಖರೀದಿಸಿರುತ್ತಾರೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅನಾರೋಗ್ಯದಿಂದ ನರಳುತ್ತಿದ್ದರು ಎಂದರೆ ಸರಿಯಲ್ಲ. 06.09.2008 ರಂದು ಅನಾರೋಗ್ಯದಿಂದ ನನ್ನ ತಂದೆ ನಿಧನಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅನಾರೋಗ್ಯದಿಂದ ಇದ್ದಾಗ 1 ನೇ ಪ್ರತಿವಾದಿಯು ಮನೆತನದ ಯಜಮಾನಿಕೆಯನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಧರ್ಮದ ಪ್ರಕಾರ ಹೆಣ್ಣು ಮಕ್ಕಳ ಮದುವೆಯನ್ನು ತವರು ಮನೆಯವರ ಖರ್ಚಿನಲ್ಲಿ ಮಾಡಬೇಕು ಎಂದರೆ ಸರಿ. ಮದುವೆ ಕಾಲಕ್ಕೆ ಬಹಳಷ್ಟು ಖರ್ಚು -ವೆಚ್ಚಗಳು ಇರುತ್ತವೆ ಎಂದರೆ ಸರಿ. ನನ್ನ ಮತ್ತು ಉಳಿದ ವಾದಿಯರ ಮದುವೆಯನ್ನು ನನ್ನ ತಂದೆ-ತಾಯಿ ಮತ್ತು ಸಹೋದರರು ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮಾತ್ರ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ಅನಾರೋಗ್ಯದಿಂದ ಇದ್ದ ಕಾರಣ ನನ್ನ ತಾಯಿ ಮತ್ತು ಸಹೋದರರು ಸೇರಿ ನನ್ನ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ.

3. ಪ್ರತಿವಾದಿಗಳು ಆರ್ಥಿಕವಾಗಿ ದುರ್ಬಲರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮಿಕ್ಕಿ ರಿಪೇರಿ ಕೆಲಸ ಮಾಡುತ್ತಾರೆ ಮತ್ತು 3 ನೇ ಪ್ರತಿವಾದಿಯು ತಳ್ಳುವ ಗಾಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ವಯಸ್ಸಾಗಿದೆ ಎಂದರೆ ಸರಿ. ಆದ್ದರಿಂದ ಪ್ರತಿವಾದಿಗಳಿಗೆ ಯಾವುದೇ ರೀತಿ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮದುವೆಗಳನ್ನು ಅದ್ದೂರಿಯಾಗಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ತಂದೆ ಅನಾರೋಗ್ಯದಿಂದ ಇದ್ದ ಕಾರಣ ನನ್ನ ತಾಯಿಯೇ ಮನೆತನವನ್ನು ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಸುಮಾರು ಕಡೆ ಕೈಗಡ ಸಾಲ ಮಾಡಿ, ನಮ್ಮಗಳ ಮದುವೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಬಹಳಷ್ಟು ಸಾಲ ಮಾಡಿ ನಮ್ಮಗಳ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ.

4. ಪ್ರತಿವಾದಿಗಳು 30.09.1999 ರಂದು ದಾವಾ ಎ ಶೆಡ್ಯೂಲ್ ಸ್ವತ್ತಿನ ಪೈಕಿ 1 ಎಕರೆ 10 ಗುಂಟೆಯನ್ನು 4 ವರ್ಷಗಳ ಕಾಲ 20,000 ರೂ.ಗಳಿಗೆ ಹಾಲೇಶಪ್ಪ ಎನ್ನುವವರಿಗೆ ಭೋಗ್ಯಕ್ಕೆ ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ಜಮೀನನ್ನು ಭೋಗ್ಯಕ್ಕೆ ಕೊಡುವಾಗ ನನ್ನ ತಂದೆ ಒಪ್ಪಿದ್ದರು ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ ನನ್ನ ತಂದೆಯವರು ಇರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮದುವೆಯ ಖರ್ಚಿಗಾಗಿ ಪ್ರತಿವಾದಿಗಳು 31.12.1999 ರಂದು ಎ ಶೆಡ್ಯೂಲ್ ನ ಪೈಕಿ 6 ಹಾಳೆಗಳನ್ನು ಎ ಚಿದಾನಂದಪ್ಪ ಎನ್ನುವವರಿಗೆ 22,000 ರೂ.ಗಳಿಗೆ 6 ವರ್ಷಕ್ಕೆ ಭೋಗ್ಯಕ್ಕೆ ಹಾಕಿದ್ದರು ಎಂದರೆ ಸುಳ್ಳು.

5. 08.01.2002 ರಂದು ದಾವಾ ಎ ಶೆಡ್ಯೂಲ್ ನ ಪೈಕಿ 37 ಗುಂಟೆಯನ್ನು 30,000 ರೂ.ಗಳಿಗೆ ಎ. ಚಿದಾನಂದಪ್ಪ ರವರಿಗೆ 4 ವರ್ಷಗಳ ಕಾಲ ಹಾಲೇಶಪ್ಪ ಇವರಿಂದ 1 ಎಕರೆ 10 ಗುಂಟೆಯನ್ನು ಬಿಡಿಸಿಕೊಳ್ಳುವ ಸಂಬಂಧ ಚಿದಾನಂಪ್ಪರವರಿಗೆ ಭೋಗ್ಯಕ್ಕೆ ಹಾಕಲಾಗಿತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಅವರ ಕಷ್ಟಕ್ಕೆ ಹಾಕಿಕೊಂಡಿರಬಹುದು ನನಗೆ ಮಾಹಿತಿ ಇಲ್ಲ. ಹಾಲೇಶಪ್ಪ ಇವರಿಗೆ 20,000 ರೂ.ಗಳನ್ನು ಕೊಟ್ಟು 1 ಎಕರೆ 10 ಗುಂಟೆಯನ್ನು ಭೋಗ್ಯದ ಹಣದಿಂದ ಬಿಡಿಸಿಕೊಳ್ಳಲಾಗಿತ್ತು ಎಂದರೆ ಸುಳ್ಳು. ನಾನು ಈ ದಿನ ಶಿವಮೊಗ್ಗದಿಂದ ಬಂದಿದ್ದೇನೆ ಎಂದರೆ ಸರಿ. ನಾವು 3 ಜನ ವಾದಿಗಳು ಶಿವಮೊಗ್ಗದಲ್ಲಿ ವಾಸವಿದ್ದೇವೆ ಎಂದರೆ ಸರಿ. ನಮಗೆ ಶಿವಮೊಗ್ಗದಲ್ಲಿ ಸ್ವಂತ ಮನೆ ಇದೆ ಎಂದರೆ ಸರಿಯಲ್ಲ.

6. ನಾವು ಶಿವಮೊಗ್ಗದ ಮೆಹಬೂಬ್ ನಗರದಲ್ಲಿ ಒಂದು ಸೈಟನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಸೈಟ್ ನನ್ನ ಪತಿಯ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಸದರಿ ಸೈಟ್ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ವಾದಿಯರಿಗೆ ಶಿವಮೊಗ್ಗದಲ್ಲಿ ಸ್ವಂತ ಮನೆಗಳಿವೆ ಎಂದರೆ ಸರಿಯಲ್ಲ. 3 ಜನ ವಾದಿಯರಿಗೆ ಸ್ವಂತ ಮನೆಗಳಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. 2008 ಕ್ಕಿಂತ ಮೊದಲು ನಾನು, ನನ್ನ ಪತಿ ಸೈಟ್ ಖರೀದಿ ಮಾಡುವ ಸಂಬಂಧ 1 ನೇ ಪ್ರತಿವಾದಿಯ ಬಳಿ ಹಣ ಕೇಳಿದ್ದೆವು ಎಂದರೆ ಸರಿಯಲ್ಲ.

7. 19.05.2008 ರಂದು ನನ್ನ ತಾಯಿ ಅಬ್ದುಲ್ ಜಲೀಲ್ ಸಾಬ್ ಬಿನ್ ಅಬ್ದುಲ್ ಗಫಾರ್ ಸಾಬ್ ಇವರಿಗೆ ದಾವಾ ಶೆಡ್ಯೂಲ್ ಎ ಸ್ವತ್ತನ್ನು 95,000 ರೂ.ಗಳಿಗೆ 10 ವರ್ಷಕ್ಕೆ ಭೋಗ್ಯಕ್ಕೆ ಹಾಕಿ ನನ್ನ ಪತಿಗೆ ಸೈಟ್ ಖರೀದಿ ಮಾಡಲು ಹಣಕಾಸಿನ ಸಹಾಯವನ್ನು 1 ನೇ ಪ್ರತಿವಾದಿ ಮಾಡಿದ್ದರು ಎಂದರೆ ಸರಿಯಲ್ಲ. ಹಣ ಹಿಂತಿರುಗಿಸಿದ ನಂತರ ಜಮೀನನ್ನು ವಾಪಾಸ್ಸು ಕೊಡುವುದಾಗಿ ಸದರಿ ಅಬ್ದುಲ್ ಜಲೀಲ್ ಸಾಬ್ ರವರ ಜೊತೆ ಒಪ್ಪಂದ ಮಾಡಿಕೊಂಡು ನನ್ನ ಪತಿಗೆ ಸೈಟ್ ಖರೀದಿ ಮಾಡಲು ನನ್ನ ತಾಯಿ ಹಣಕಾಸಿನ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನನ್ನು ಬಿಡಿಸಿಕೊಳ್ಳಲು ಕೇರಳದವರಿಗೆ ಜಮೀನನ್ನು ಒಂದೂವರೆ ವರ್ಷಗಳ ಕಾಲ 1 ಲಕ್ಷ ರೂ.ಗಳಿಗೆ ಭೋಗ್ಯಕ್ಕೆ ಹಾಕಿದ್ದರು ಮತ್ತು ಭೋಗ್ಯದ ಹಣದಿಂದ ಅಬ್ದುಲ್ ಜಲೀಲ್ ಸಾಬ್ ಇವರ ಹಣವನ್ನು ಹಿಂತಿರುಗಿಸಿದ್ದರು ಎಂದರೆ ಸುಳ್ಳು. ಸದರಿ ಕೇರಳದವರಿಂದ ಜಮೀನನ್ನು ಬಿಡಿಸಿಕೊಂಡು ಮತ್ತೆ ಶಿರಾಳಕೊಪ್ಪದ ಮೊಟ್ಟೆ ಶಬ್ಬೀರ್ ಸಾಬ್ ಇವರಿಗೆ 6 ವರ್ಷಗಳ ಕಾಲ ಜಮೀನನ್ನು ಭೋಗ್ಯಕ್ಕೆ ಹಾಕಿದ್ದರು ಎಂದರೆ ಸುಳ್ಳು. ಶಬ್ಬೀರ್ ಸಾಬ್ ಇವರಿಗೆ ಕೊಡಬೇಕಾದ ಹಣ ಇನ್ನು ಬಾಕಿ ಇರುವ ಕಾರಣ ದಾವಾ ಎ ಶೆಡ್ಯೂಲ್ ಸ್ವತ್ತಿನ ಕಬ್ಜೆ ಶಬ್ಬೀರ್ ಸಾಬ್ ಇವರ ಬಳಿ ಇದೆ ಎಂದರೆ ಸರಿಯಲ್ಲ.

ವಿನಂತಿ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ .ಎಂ.ಎಫ್.ಸಿ. ಶಿಕಾರಿಪುರ.